# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 354 |
| ಸದಸ್ಯರ ಹೆಸರು | ಶ್ರೀ ಮಧು ಜಿ.ಮಾದೇಗೌಡ |
| ಉತ್ತರಿಸುವ ದಿನಾಂಕ | 13.08.2025 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ದೇವಸ್ಥಾನಗಳಲ್ಲಿ ನೀರಿನ ಬಾಟಲ್ ಸೇರಿದಂತೆ ಎಲ್ಲಾ ರೀತಿಯ ಪ್ಲಾಸ್ಟಿಕ್ ಉತ್ಪನ್ನಗಳ ಬಳಕೆಯನ್ನು ನಿಷೇಧಿಸಲು ಸರ್ಕಾರ ಉದ್ದೇಶಿಸಿದೆಯೇ ಇದ್ದಲ್ಲಿ ಈ ಆದೇಶ ಎಂದಿನಿಂದ ಜಾರಿಗೆ ಬರಲಿದೆ. | ➢ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:09.06.2025ರಂದು ನಡೆದ ಸಭೆಯಲ್ಲಿ ಧಾರ್ಮಿಕ ದತ್ತಿ ಇಲಾಖೆಯ ಅಧಿಸೂಚಿತ/ ಘೋಷಿತ ದೇವಾಲಯ/ಸಂಸ್ಥೆಗಳ ಪರಿಸರವನ್ನು ಸ್ವಚ್ಛವಾಗಿಡಲು ಉದ್ದೇಶಿಸಿ 2025 ನೇ ಆಗಸ್ಟ್ 15 ರಿಂದ ಅನ್ವಯವಾಗುವಂತೆ ಪರಿಣಾಮಕಾರಿಯಾಗಿ ಮತ್ತು ಕಡ್ಡಾಯವಾಗಿ ಜಾರಿಗೆ ಬರುವಂತೆ ದೇವಾಲಯಗಳಲ್ಲಿ One time plastic ಬಳಕೆಯನ್ನು ಸಂಪೂರ್ಣ ನಿಷೇಧಿಸಲು ಕಟ್ಟುನಿಟ್ಟಿನ ಕ್ರಮ ಜರುಗಿಸಲು ಸೂಚಿಸಿರುತ್ತಾರೆ. ಮಾನ್ಯ ಸಚಿವರ ಸೂಚನೆಯಂತೆ ಧಾರ್ಮಿಕ ದತ್ತಿ ಆಯುಕ್ತರು ದಿನಾಂಕ: 11.06.2025 ರಂದು ಸುತ್ತೋಲೆಯನ್ನು ಹೊರಡಿಸಿದ್ದು, 2025ನೇ ಆಗಸ್ಟ್ 15 ರಿಂದ ಅನ್ವಯವಾಗುವಂತೆ ಇಲಾಖೆಯ ದೇವಾಲಯಗಳಲ್ಲಿ ಕಡ್ಡಾಯವಾಗಿ ನೀರಿನ ಬಾಟಲ್ ಸೇರಿದಂತೆ ಪ್ಲ್ಯಾಸ್ಟಿಕ್ ನಿಷೇಧವನ್ನು ಜಾರಿಗೊಳಿಸಲು ಧಾರ್ಮಿಕ ದತ್ತಿ ಇಲಾಖೆಯ ಎಲ್ಲಾ ಅಧಿಕಾರಿಗಳಿಗೂ ನಿರ್ದೇಶನ ನೀಡಲಾಗಿರುತ್ತದೆ. **(ಸುತ್ತೋಲೆಯ ಪ್ರತಿ ಲಗತ್ತಿಸಿದೆ).** |
| ಆ) | ಈ ಆದೇಶವು ಮುಜರಾಯಿ ಇಲಾಖೆ ಅಧೀನದ ದೇವಸ್ಥಾನಗಳಿಗೆ ಮಾತ್ರ ಅನ್ವಯವಾಗುವುದೋ ಅಥವಾ ಎಲ್ಲಾ ದೇವಾಲಯಗಳಿಗೂ ಅನ್ವಯಿಸಲಿದೆಯೇ ( ಸಂಪೂರ್ಣ ವಿವರ ನೀಡುವುದು) | ➢ ಈ ಆದೇಶವನ್ನು ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೆ ಒಳಪಡುವ ಎಲ್ಲಾ ಅಧಿಸೂಚಿತ ಮತ್ತು ಘೋಷಿತ ದೇವಾಲಯ /ಸಂಸ್ಥೆಗಳಿಗೆ ಅನ್ವಯಿಸುವಂತೆ ಹೊರಡಿಸಲಾಗಿದೆ.<br><br>➢ ಖಾಸಗಿ ದೇವಾಲಯಗಳು ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೊಳಪಡುವುದಿಲ್ಲ. |
| ಇ) | ಒಂದು ವೇಳೆ ಸರ್ಕಾರದ ಆದೇಶವನ್ನು ಉಲ್ಲಂಘಿಸಿ ಪ್ಲಾಸ್ಟಿಕ್ ಉತ್ಪನ್ನಗಳನ್ನು ಬಳಸಿದ್ದಲ್ಲಿ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು:<br>( ವಿವರ ನೀಡುವುದು) | ➢ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ದೇವಾಲಯಗಳಲ್ಲಿ ಕಡ್ಡಾಯವಾಗಿ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಿದ್ದು, ಪ್ಲಾಸ್ಟಿಕ್ ಉತ್ಪನ್ನಗಳನ್ನು ಬಳಸಿದಲ್ಲಿ ದಂಡ ವಿಧಿಸುವಂತೆ ಸಂಬಂಧಪಟ್ಟ ದೇವಾಲಯಗಳ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. |

| | | |
|---|---|---|
| | | ➤ ದೇವಾಲಯಗಳ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಬಳಕೆ ಮಾಡುತ್ತಿರುವುದು ಕಂಡು ಬಂದಲ್ಲಿ ಹಾಗೂ ಇಲಾಖೆಯ ದೇವಾಲಯಗಳಲ್ಲಿ ಸರ್ಕಾರದ ಆದೇಶವನ್ನು ಉಲ್ಲಂಘಿಸಿ ಪ್ಲಾಸ್ಟಿಕ್ ಉತ್ಪನ್ನಗಳನ್ನು ಬಳಸಿದಲ್ಲಿ ಸಂಬಂಧಪಟ್ಟವರ ವಿರುದ್ಧ IPC 198 ಅಡಿಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಸಹ ಪರಿಶೀಲಿಸಿ ಕಾನೂನು ರೀತ್ಯ ಕ್ರಮ ಕೈಗೊಳ್ಳುವುದಕ್ಕೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. |
| ಈ) | ರಾಜ್ಯ ಸರ್ಕಾರದ ದೇವಾಲಯಗಳಿಂದ ಬರುವ ಹಣವನ್ನು ಮುಜರಾಯಿ ಇಲಾಖೆಯು ಅನ್ಯ ಉದ್ದೇಶಗಳಿಗೆ ಬಳಸಿಕೊಳ್ಳುತ್ತಿರುವ ಕುರಿತು ಸರ್ಕಾರದ ಸಷ್ಟತೆ ಏನು; | ➤ ದೇವಾಲಯಗಳಲ್ಲಿ ಸಂಗ್ರಹವಾಗುವ ಯಾವುದೇ ಆದಾಯವನ್ನು ಸರ್ಕಾರಕ್ಕೆ ಸಂದಾಯ ಮಾಡಲಾಗುವುದಿಲ್ಲ.<br><br>➤ ದೇವಾಲಯದಲ್ಲಿ ಸಂಗ್ರಹವಾದ ಆದಾಯವನ್ನು ಆಯಾಯ ದೇವಾಲಯಗಳ ನಿಧಿಗೆ (ಬ್ಯಾಂಕ್ ಖಾತೆ)ಗೆ ಜಮಾ ಮಾಡಲಾಗುತ್ತಿದೆ.<br><br>➤ ದೇವಾಲಯದಲ್ಲಿ ಸಂಗ್ರಹವಾಗುವ ಹಣವನ್ನು ಆಯಾಯ ದೇವಾಲಯದ ನಿರ್ವಹಣೆಗೆ ನಿತ್ಯಕಟ್ಲೆ, ಹೆಚ್ಚುಕಟ್ಲೆ, ರಥೋತ್ಸವ, ಸಿಬ್ಬಂದಿ ವೆಚ್ಚ, ಅಭಿವೃದ್ಧಿ/ ಜೀರ್ಣೋದ್ಧಾರ ಮತ್ತು ಮೂಲಭೂತ ಸೌಕರ್ಯ ಹಾಗೂ ದೇವಾಲಯದ ವತಿಯಿಂದ ನಡೆಸುವ ಶಿಕ್ಷಣ ಸಂಸ್ಥೆಗಳ ನಿರ್ವಹಣೆ, ಧಾರ್ಮಿಕ ಉದ್ದೇಶ ಇತ್ಯಾದಿಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆ ಕಲಂ 36 (1) ರಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಆಯವ್ಯಯದ ಅನ್ವಯ ಬಳಸಲಾಗುತ್ತಿದ್ದು, ಇದರ ಹೊರತಾಗಿ ಅನ್ಯ ಉದ್ದೇಶಗಳಿಗೆ ಬಳಸಲಾಗುತ್ತಿರುವುದಿಲ್ಲ.<br><br>➤ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆ ಕಲಂ 17(ಎ) ರಡಿಯಲ್ಲಿ ಅವಕಾಶ ಕಲ್ಪಿಸಲಾದಂತೆ ಪ್ರವರ್ಗ 'ಎ' ಅಧಿಸೂಚಿತ ಅಥವಾ ಘೋಷಿತ ಸಂಸ್ಥೆಗಳು ತಮ್ಮ ಒಟ್ಟು ವಾರ್ಷಿಕ ನಿವ್ವಳ ಆದಾಯದ ಶೇಕಡ 10 ರಷ್ಟು ಮತ್ತು 'ಬಿ' ವರ್ಗದ ಅಧಿಸೂಚಿತ ಅಥವಾ ಘೋಷಿತ ಸಂಸ್ಥೆಗಳು ತಮ್ಮ ಒಟ್ಟು ವಾರ್ಷಿಕ ನಿವ್ವಳ ಆದಾಯದ ಶೇಕಡ 5 ರಷ್ಟು ದರದಲ್ಲಿ ವಂತಿಗೆಗಳನ್ನು ಸಾಮಾನ್ಯ ಸಂಗ್ರಹಣಾ ನಿಧಿ ಪಾವತಿಸಬೇಕಾಗಿರುತ್ತದೆ. |

- ಕಳೆದ ಎರಡು ವರ್ಷಗಳಲ್ಲಿ ಪ್ರವರ್ಗ 'ಎ' ಮತ್ತು 'ಬಿ' ಅಧಿಸೂಚಿತ ಅಥವಾ ಘೋಷಿತ ಸಂಸ್ಥೆಗಳಿಂದ ಸಾಮಾನ್ಯ ಸಂಗ್ರಹಣಾ ನಿಧಿಗೆ ಸಂಗ್ರಹವಾದ ಮತ್ತು ಖರ್ಚಾದ ಮೊತ್ತ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ | ವರ್ಷ | ಸಾಮಾನ್ಯ ಸಂಗ್ರಹಣಾ ನಿಧಿಯಲ್ಲಿ ಸಂಗ್ರಹವಾದ ಮೊತ್ತ (ರೂ.ಗಳಲ್ಲಿ) | ಖರ್ಚಾದ ಮೊತ್ತ (ರೂ.ಗಳಲ್ಲಿ) |
|---|---|---|---|
| 1. | 2023-24 | 10,22,02,959 | 2,86,61,030 |
| 2. | 2024-25 | 16,10,55,401 | 4,08,77,151 |

- ಸಾಮಾನ್ಯ ಸಂಗ್ರಹಣಾ ನಿಧಿಗೆ ಸಂಗ್ರಹವಾದ ಹಣವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆ ಕಲಂ 19(1) ಮತ್ತು (2) ರನ್ವಯ ಷರತ್ತಿಗೆ ಒಳಪಟ್ಟು ಈ ಮುಂದಿನ ಉದ್ದೇಶಗಳಿಗಾಗಿ ನಿರ್ವಹಿಸತಕ್ಕದ್ದಾಗಿದೆ.

**(ಎ)**ಬಡತನದಲ್ಲಿರುವ ಅಥವಾ ಅಗತ್ಯ ಸಂದರ್ಭದಲ್ಲಿರುವ ಇತರ ಯಾವುದೇ ಧಾರ್ಮಿಕ ಸಂಸ್ಥೆಗೆ ಸಹಾಯ ನೀಡಿಕೆ;

**(ಬಿ)**ಹಿಂದೂ ಧರ್ಮಕ್ಕೆ ಸಂಬಂಧಿಸಿದ ಯಾವುದೇ ಧಾರ್ಮಿಕ ಉದ್ದೇಶಗಳಿಗೆ ಸಹಾಯ ನೀಡಿಕೆ;

**(ಸಿ)** ಸಂಸ್ಥೆಯ ಧಾರ್ಮಿಕ ಸಿದ್ಧಾಂತಗಳ ಪ್ರಚಾರ;

**(ಡಿ)** ವೇದ ಪಾಠಶಾಲೆಗಳು, ಆಗಮ ಪಾಠ ಶಾಲೆಗಳು ಮತ್ತು ಅರ್ಚಕರಿಗೆ ತರಬೇತಿ ನೀಡುವ ಸಲುವಾಗಿ ಹಾಗೂ ಆ ಉದ್ದೇಶಕ್ಕಾಗಿ ಪ್ರಾಚೀನ ಬರಹಗಳ ಮತ್ತು ಭಾರತೀಯ ಭಾಷೆಗಳ ಅಧ್ಯಯನ ಮಾಡುವ ಸಲುವಾಗಿ ಶಾಲೆಗಳ ಸ್ಥಾಪನೆ ಹಾಗೂ ನಿರ್ವಹಣೆ;

**(ಇ)** ಹಿಂದೂ ಧರ್ಮ, ತತ್ವಶಾಸ್ತ್ರ, ಅಥವಾ ಶಾಸ್ತ್ರಗಳ ಅಧ್ಯಯನ ಅಥವಾ ಹಿಂದೂ ದೇವಸ್ಥಾನ ವಾಸ್ತುಶಿಲ್ಪದಲ್ಲಿ ಶಿಕ್ಷಣ ನೀಡುವ ಉದ್ದೇಶ ಹೊಂದಿರುವ ವಿಶ್ವವಿದ್ಯಾನಿಲಯ, ಕಾಲೇಜು ಅಥವಾ ಇತರ ಸಂಸ್ಥೆಯ ಸ್ಥಾಪನೆ ಮತ್ತು ನಿರ್ವಹಣೆ;

**(ಎಫ್)** ಹಿಂದೂ ಧರ್ಮದ ವಿಷಯದಲ್ಲಿ ಶಿಕ್ಷಣವನ್ನು ನೀಡಲಾಗುವ ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಮತ್ತು ನಿರ್ವಹಣೆ;

**(ಜಿ)** ದೇವಸ್ಥಾನ ಕಲೆಗಳು ಮತ್ತು ವಾಸ್ತುಶಿಲ್ಪಕ್ಕೆ ಉತ್ತೇಜನ.

**(ಹೆಚ್)** ಅನಾಥ ಹಿಂದೂ ಮಕ್ಕಳಿಗಾಗಿ ಅನಾಥಾಲಯಗಳ ಸ್ಥಾಪನೆ ಮತ್ತು ನಿರ್ವಹಣೆ;

| | | |
|---|---|---|
| | | **(ಐ)** ಸಂಸ್ಥೆಯ ಜಮೆಯಲ್ಲಿ ಸಾಕಷ್ಟು ಹಣ ಇಲ್ಲದಿರುವಾಗ ಅರ್ಚಕರಿಗೆ ಮತ್ತು ದೇವಸ್ಥಾನದ ನೌಕರರಿಗೆ ಸೇವಾಂತ ಪ್ರಯೋಜನಗಳ ಸಂದಾಯ.<br>**(ಜೆ)** ನಿರ್ಗತಿಕ, ಅಸಹಾಯಕ ಹಾಗೂ ದೈಹಿಕವಾಗಿ ಅಸಮರ್ಥರಾದ ಜನರಿಗಾಗಿ ಆಶ್ರಯ ಧಾಮಗಳ ಸ್ಥಾಪನೆ ಹಾಗೂ ನಿರ್ವಹಣೆ;<br>**(ಕೆ)** ಯಾತ್ರಿಕರ ಅನುಕೂಲಕ್ಕಾಗಿ ಆಸ್ಪತ್ರೆಗಳು ಹಾಗೂ ಔಷಧಾಲಯಗಳ ಸ್ಥಾಪನೆ ಹಾಗೂ ನಿರ್ವಹಣೆ;<br>**(ಎಲ್)** ಯಾವುದೇ ಇತರ ಹಿಂದೂ ಧಾರ್ಮಿಕ ಅಥವಾ ಧರ್ಮಾದಾಯ ಉದ್ದೇಶ;<br>**(ಎಂ)** ಹಿಂದೂ ಧಾರ್ಮಿಕ ಸಂಸ್ಥೆಗಳು ಅಥವಾ ಯಾವುದೇ ಹಿಂದೂ ಸಂಘಟನೆಯು ಗೋಶಾಲೆಗಳನ್ನು ಸ್ಥಾಪಿಸುವುದು ಮತ್ತು ಪ್ರೋತ್ಸಾಹಿಸುವುದು;<br>**(ಎನ್)** ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದು.<br>**2)** ಸಾಮಾನ್ಯ ಸಂಗ್ರಹಣ ನಿಧಿಯನ್ನು ಈ ಮುಂದಿನಂತೆ ನಿರ್ವಹಿಸತಕ್ಕದ್ದು;<br>**(i)** ಯಾವೊಬ್ಬ ವ್ಯಕ್ತಿಯಿಂದ ಸ್ವೀಕರಿಸಿದ ಯಾವುದೇ ವಂತಿಗೆ ಅಥವಾ ಕೊಡುಗೆಯನ್ನು ದಾನಿಯು ನಿರ್ದಿಷ್ಟಪಡಿಸಿದ ಉದ್ದೇಶ ಯಾವುದೇ ಇದ್ದರೆ, ಅದರ ಹೊರತಾದ ಯಾವುದೇ ಉದ್ದೇಶಕ್ಕಾಗಿ ಬಳಸತಕ್ಕದ್ದಲ್ಲ.<br>**(ii)** ಒಂದು ಯಾವುದೇ ಧಾರ್ಮಿಕ ಸಂಪ್ರದಾಯದ ಅಥವಾ ಅದರ ಯಾವುದೇ ಭಾಗದ ಸಂಸ್ಥೆಗೆ ನೀಡಿದ ವಂತಿಗೆಗಳು ಮತ್ತು ಕೊಡುಗೆಗಳನ್ನು ಆ ನಿರ್ದಿಷ್ಟ ವರ್ಗ, ಸಂಪ್ರದಾಯ ಅಥವಾ ಭಾಗದ ಅನುಕೂಲಕ್ಕಾಗಿ ಮಾತ್ರವೇ ಬಳಸತಕ್ಕದ್ದು. |
| ಉ) | ಜಿಲ್ಲಾ ಧಾರ್ಮಿಕ ಪರಿಷತ್ತನ್ನು ಎಷ್ಟು ಜಿಲ್ಲೆಗಳಲ್ಲಿ ರಚಿಸಲಾಗಿದೆ; ರಚಿಸಲು ಎಷ್ಟು ಜಿಲ್ಲೆಗಳಲ್ಲಿ ಬಾಕಿ ಇದೆ; ಯಾವ ಅವಧಿಯೊಳಗೆ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು, ಪರಿಷತ್ತಿನ ಕಾರ್ಯವ್ಯಾಪ್ತಿ ಏನು?(ವಿವರ ನೀಡುವುದು) | ➤ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ, 2011ರ ಸೆಕ್ಷನ್ 21ರನ್ವಯ ರಾಜ್ಯ ಸರ್ಕಾರವು, ರಾಜ್ಯ ಧಾರ್ಮಿಕ ಪರಿಷತ್ತಿನ ಶಿಫಾರಸ್ಸಿನ ಮೇಲೆ, ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ, ಪ್ರತಿಯೊಂದು ಜಿಲ್ಲೆಗೆ ಅಥವಾ ಇಂದು ಅಥವಾ ಹೆಚ್ಚಿನ ಜಿಲ್ಲೆಗಳಿಗೆ ಅಧಿಕಾರಿ/ಅಧಿಕಾರೇತರ ಸದಸ್ಯರುಗಳನ್ನು ಒಳಗೊಂಡಂತೆ ಜಿಲ್ಲಾ ಧಾರ್ಮಿಕ ಪರಿಷತ್ತನ್ನು ರಚಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. |

- ಅದರಂತೆ, ಸರ್ಕಾರದ ವಿವಿಧ ಆದೇಶಗಳನ್ವಯ ಈ ಕೆಳಕಂಡ **7 ಜಿಲ್ಲೆಗಳಿಗೆ** ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ 2011ರ ಸೆಕ್ಷನ್ 21ರನ್ವಯ ಜಿಲ್ಲಾ ಧಾರ್ಮಿಕ ಪರಿಷತ್ತನ್ನು ರಚಿಸಲ್ಪಟ್ಟಿರುತ್ತದೆ.

| ಕ್ರ ಸಂ | ಜಿಲ್ಲೆ | ಸರ್ಕಾರದ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ: |
|---|---|---|
| 1. | ಬೆಂಗಳೂರು ನಗರ | ಕಂಇ 50 ಮುಸೇವಿ 2024, ದಿನಾಂಕ:14.03.2024. |
| 2. | ದಕ್ಷಿಣ ಕನ್ನಡ | ಕಂಇ 35 ಮುಸೇವಿ 2024, ದಿನಾಂಕ:14.03.2024. |
| 3. | ಉತ್ತರ ಕನ್ನಡ | ಕಂಇ 155 ಮುಸೇವಿ 2024, ದಿನಾಂಕ:07.12.2024. |
| 4. | ರಾಮನಗರ | ಕಂಇ 138 ಮುಸೇವಿ 2024, ದಿನಾಂಕ:02.01.2025. |
| 5. | ಶಿವಮೊಗ್ಗ | ಕಂಇ 36 ಮುಸೇವಿ 2024, ದಿನಾಂಕ:21.06.2024. |
| 6. | ತುಮಕೂರು | ಕಂಇ 50 ಮುಸೇವಿ 2025, ದಿನಾಂಕ:15.02.2025. |
| 7. | ಉಡುಪಿ | ಕಂಇ 38 ಮುಸೇವಿ 2024, ದಿನಾಂಕ06.03.2024 |

- 23 ಜಿಲ್ಲೆಗಳಿಗೆ ಜಿಲ್ಲಾ ಧಾರ್ಮಿಕ ಪರಿಷತ್ತನ್ನು ರಚಿಸಲು ಬಾಕಿ ಇದೆ.

- ಜಿಲ್ಲಾ ಧಾರ್ಮಿಕ ಪರಿಷತ್ತನ್ನು ರಚಿಸಲು ಬಾಕಿಯಿರುವ 23 ಜಿಲ್ಲೆಗಳಿಗೆ ಜಿಲ್ಲಾ ಧಾರ್ಮಿಕ ಪರಿಷತ್ತನ್ನು ರಚಿಸಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಸ್ವೀಕೃತಗೊಂಡ ಕೂಡಲೇ ಪರಿಶೀಲಿಸಿ ಜಿಲ್ಲಾ ಧಾರ್ಮಿಕ ಪರಿಷತ್ತನ್ನು ರಚಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ, 2011ರ ಸೆಕ್ಷನ್ 21-ಎ ಜಿಲ್ಲಾ ಧಾರ್ಮಿಕ ಪರಿಷತ್ತಿನ ಅಧಿಕಾರಗಳು ಮತ್ತು ಪ್ರಕಾರ್ಯಗಳಂತೆ ಜಿಲ್ಲಾ ಧಾರ್ಮಿಕ ಪರಿಷತ್ತಿನ ಕಾರ್ಯ ವ್ಯಾಪ್ತಿಯನ್ನು ಸ್ಪಷ್ಟಪಡಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ).

ಕಂಇ 141 ಮುಸಪ್ರ 2025

(ರಾಮಲಿಂಗಾರೆಡ್ಡಿ),
ಸಾರಿಗೆ ಮತ್ತು ಮುಜರಾಯಿ ಸಚಿವರು

ಕರ್ನಾಟಕ ಸರ್ಕಾರ

ಆಯುಕ್ತರ ಕಾರ್ಯಾಲಯ,
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ,
4ನೇ ಮಹಡಿ, ಶ್ರೀ ಮಿಂಟೋ ಆಂಜನೇಯ ಸ್ವಾಮಿ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ,
ಬೆಂಗಳೂರು-18.ದೂರವಾಣಿ: 26709689/ 26706775 mail: endowmentcommissioner@gmail.com

ಸಂಖ್ಯೆ:E-1663713 HRICE- ADM0MISC/56/2025 ದಿನಾಂಕ:11.06.2025.

## -:ಸುತ್ತೋಲೆ:-

**ವಿಷಯ:** ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ಮತ್ತು ಘೋಷಿತ ದೇವಾಲಯ/ ಸಂಸ್ಥೆಗಳಲ್ಲಿ ಸಂಪೂರ್ಣ ಪ್ಲಾಸ್ಟಿಕ್ ನಿರ್ಬಂಧಿಸುವ ಹಾಗೂ ಸ್ವಚ್ಛತೆ ಕಾಪಾಡುವ ಬಗ್ಗೆ.

**ಉಲ್ಲೇಖ:**
1. ಈ ಕಛೇರಿಯ ಸುತ್ತೋಲೆ ಸಂಖ್ಯೆ:ಎಡಿಎಂ/11/ಸಿಆರ್/139/2017-18 ದಿನಾಂಕ: 19.12.2017
2. ಈ ಕಛೇರಿಯ ಸುತ್ತೋಲೆ ಸಂಖ್ಯೆ:ಎಡಿಎಂ/11/ಸಿಆರ್/219/2014-15 ದಿನಾಂಕ: 10.04.2019 ಮತ್ತು ದಿನಾಂಕ: 02.12.2022
3. ಈ ಕಛೇರಿಯ ಸುತ್ತೋಲೆ ಸಂಖ್ಯೆ:E-1663713 HRICE- ADM0MISC/ 56/ 2025, ದಿನಾಂಕ:11.03.2025.

*******

ಕರ್ನಾಟಕ ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಧಿಸೂಚಿತ ಮತ್ತು ಘೋಷಿತ ದೇವಾಲಯ/ ಸಂಸ್ಥೆಗಳಲ್ಲಿ ಸಂಪೂರ್ಣ ಪ್ಲಾಸ್ಟಿಕ್ ನಿರ್ಬಂಧಿಸುವಂತೆ ಹಾಗೂ ಸ್ವಚ್ಛತೆ ಕಾಪಾಡುವಂತೆ ಉಲ್ಲೇಖಿತ ಸುತ್ತೋಲೆ ಗಳಲ್ಲಿ ಈಗಾಗಲೇ ಅಗತ್ಯ ಸೂಚನೆಗಳನ್ನು ನೀಡಿ ಕಟ್ಟುನಿಟ್ಟಾಗಿ ಪಾಲಿಸುವಂತೆ ತಿಳಿಸಲಾಗಿರುತ್ತದೆ.

ಆದಾಗ್ಯೂ ಸಹ ಪ್ಲಾಸ್ಟಿಕ್ ನಿಷೇಧ ಕುರಿತು ಉಲ್ಲೇಖಿತ ಸುತ್ತೋಲೆಯನ್ವಯ ಬಹುತೇಕ ದೇವಸ್ಥಾನಗಳಲ್ಲಿ ಕ್ರಮವಹಿಸದೇ ಇರುವುದು ಕಂಡುಬಂದಿರುತ್ತದೆ. ಅಲ್ಲದೇ ದೇವಾಲಯದ ಒಳಾಂಗಣದಲ್ಲಿ ಅಭಿಷೇಕ ಮತ್ತು ಪೂಜಾ ಕಾರ್ಯಗಳಿಗೆ ಪ್ಲಾಸ್ಟಿಕ್ ಬಿಂದಿಗೆ, ಪ್ಲಾಸ್ಟಿಕ್ ಬಕೆಟ್, ಪ್ಲಾಸ್ಟಿಕ್ ಜಗ್ಗ್ ಇತರೆ ಪ್ಲಾಸ್ಟಿಕ್ ಸಾಮಗ್ರಿಗಳನ್ನು ಬಳಸುತ್ತಿರುವುದು ಕಂಡು ಬಂದಿರುತ್ತದೆ. ಇದು ದೇವಾಲಯದ ಧಾರ್ಮಿಕ ಪಾವಿತ್ರ್ಯತೆಗೆ ಪೂರಕವಾಗಿರುವುದಿಲ್ಲ.

ಮಾನ್ಯ ಮುಜರಾಯಿ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 09/06/2025ರಂದು ನಡೆದ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿಯೂ ಸಹ ಸದರಿ ವಿಷಯದ ಬಗ್ಗೆ ಪ್ರಸ್ತಾಪವಾಗಿದ್ದು, ಈ ಹಿನ್ನಲೆಯಲ್ಲಿ ಮಾನ್ಯ ಸಚಿವರು 2025ನೇ ಆಗಸ್ಟ 15 ರಿಂದ ರಾಜ್ಯದ ಧಾರ್ಮಿಕ ದತ್ತಿ ಇಲಾಖಾ ದೇವಸ್ಥಾನಗಳಲ್ಲಿ ನೀರಿನ ಬಾಟಲ್ ಸೇರಿದಂತೆ ಎಲ್ಲಾ ರೀತಿಯ ಪ್ಲಾಸ್ಟಿಕ್ ಸಾಮಗ್ರಿಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲು ಸೂಚಿಸಿರುತ್ತಾರೆ.

ಆದ್ದರಿಂದ, ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೆ ಒಳಪಡುವ ಎಲ್ಲಾ ಅಧಿಸೂಚಿತ ಮತ್ತು ಘೋಷಿತ ದೇವಾಲಯ/ ಸಂಸ್ಥೆಗಳಲ್ಲಿ 2025ನೇ ಆಗಸ್ಟ 15 ರಿಂದ ಅನ್ವಯವಾಗು ವಂತೆ ನೀರಿನ ಬಾಟಲ್ ಸೇರಿದಂತೆ ಎಲ್ಲಾ ರೀತಿಯ ಪ್ಲಾಸ್ಟಿಕ್ ಸಾಮಗ್ರಿಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಿ ಕಟ್ಟುನಿಟ್ಟಿನ ಸೂಚನೆ ಯನ್ನು ನೀಡಿದೆ.

11/6/25

ಆಯುಕ್ತರು
ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು

**ಇವರಿಗೆ,**

1. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
2. ಸಂಬಂಧಿಸಿದ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗಳು/ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರು/ ಆಡಳಿತಾಧಿಕಾರಿಗಳು/ ಅನುವಂಶಿಕ ಮೊಕ್ತೇಸರರು.
3. ಎಲ್ಲಾ ಉಪ ವಿಭಾಗಗಳ ಉಪವಿಭಾಗಾಧಿಕಾರಿಗಳು

(vi) 28ನೇ ಪ್ರಕರಣದಡಿಯಲ್ಲಿ ಉಪಬಂಧಿಸಲಾದಂತೆ [1][ಇಪ್ಪತ್ತೈದು ಲಕ್ಷ ರೂಪಾಯಿಗಳು] ಮತ್ತು ಅದಕ್ಕಿಂತ ಹೆಚ್ಚಿನ ಒಟ್ಟು ಆದಾಯವನ್ನು ಹೊಂದಿರುವ ಅಧಿಸೂಚಿತ ಸಂಸ್ಥೆಗಳ ವ್ಯವಸ್ಥಾಪನಾ ಸಮಿತಿಯನ್ನು ರದ್ದುಪಡಿಸಬಹುದು ಮತ್ತು 29ನೇ ಪ್ರಕರಣದಡಿಯಲ್ಲಿ ಅಧಿಸೂಚಿತ ಸಂಸ್ಥೆಗಳಿಗೆ ಆಡಳಿತಗಾರನನ್ನು ನೇಮಕ ಮಾಡಿಕೊಳ್ಳಬಹುದು.

(vii) ಶಾಶ್ವತ ಖಾಲಿ ಸ್ಥಾನವು ಉಂಟಾದಾಗ ಮತ್ತು ವಂಶಪಾರಂಪರ್ಯ ಪದದಲ್ಲಿ ಅದಕ್ಕೆ ಯಾವುದೇ ವಿವಾದವಿಲ್ಲದಿದ್ದರೆ ವಂಶಪಾರಂಪರ್ಯ ನ್ಯಾಸಧಾರಿಯ ಪದಕ್ಕೆ ಉತ್ತರಾಧಿಕಾರಿಯಾಗಲು ಹಕ್ಕುಳ್ಳ ಕುಟುಂಬದ ಸದಸ್ಯನ ಹೆಸರನ್ನು ದಾಖಲು ಮಾಡತಕ್ಕದ್ದು.]

[2][(3) ಎಲ್ಲಾ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಆಡಳಿತವು ರಾಜ್ಯ ಧಾರ್ಮಿಕ ಪರಿಷತ್ತಿನ ಸಾಮಾನ್ಯ ಮೇಲ್ವಿಚಾರಣೆಯ ಮತ್ತು ನಿಯಂತ್ರಣದ ಅಡಿಯಲ್ಲಿ ಇರತಕ್ಕದ್ದು ಮತ್ತು ಅಂಥ ಮೇಲ್ವಿಚಾರಣೆ ಹಾಗೂ ನಿಯಂತ್ರಣವು, ಅಂಥ ಸಂಸ್ಥೆಗಳು ಮತ್ತು ದತ್ತಿಗಳು ಉಚಿತ ರೀತಿಯಲ್ಲಿ ಆಡಳಿತ ನಡೆಸಲ್ಪಡುತ್ತಿವೆ ಹಾಗೂ ಅವುಗಳ ಆದಾಯವು, ಅವುಗಳು ಸ್ಥಾಪನೆಯಾಗಿರುವ ಅಥವಾ ಅಸ್ತಿತ್ವದಲ್ಲಿರುವ ಉದ್ದೇಶಕ್ಕಾಗಿ ಸೂಕ್ತವಾಗಿ ವಿನಿಯೋಗಿಸಲ್ಪಡುತ್ತಿದೆ ಎಂಬುದನ್ನು ಖಚಿತಪಡಿಸಿ ಕೊಳ್ಳುವುದಕ್ಕೆ ಅವಶ್ಯವಾಗಬಹುದಾದ ಯಾವುದೇ ಆದೇಶವನ್ನು ಹೊರಡಿಸುವುದಕ್ಕೆ ಅಥವಾ ನಿರ್ದೇಶನಗಳನ್ನು ನೀಡುವುದಕ್ಕೆ ಅಧಿಕಾರವನ್ನು ಒಳಗೊಂಡಿರತಕ್ಕದ್ದು.]

[3][**21. ಜಿಲ್ಲಾ ಧಾರ್ಮಿಕ ಪರಿಷತ್ತು / Zilla Dharmika Parishat.**– (1) ರಾಜ್ಯ ಸರ್ಕಾರವು, ರಾಜ್ಯ ಧಾರ್ಮಿಕ ಪರಿಷತ್ತಿನ ಶಿಫಾರಸ್ಸಿನ ಮೇಲೆ, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಪ್ರತಿಯೊಂದು ಜಿಲ್ಲೆಗೆ ಅಥವಾ ಒಂದು ಅಥವಾ ಹೆಚ್ಚಿನ ಜಿಲ್ಲೆಗಳಿಗೆ ಈ ಮುಂದಿನ ಸದಸ್ಯರುಗಳನ್ನು ಒಳಗೊಂಡಂತೆ ಜಿಲ್ಲಾ ಧಾರ್ಮಿಕ ಪರಿಷತ್ತನ್ನು ರಚಿಸತಕ್ಕದ್ದು, ಎಂದರೆ:–

(ಎ) ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿ –ಅಧ್ಯಕ್ಷರು

(ಬಿ) ಲಭ್ಯವಿರುವೆಡೆಗಳಲೆಲ್ಲ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಸಂಬಂಧಪಟ್ಟ ಸಹಾಯಕ ಆಯುಕ್ತರು, ಅಥವಾ ಜಿಲ್ಲಾಧಿಕಾರಿ ಕಚೇರಿಯ ದತ್ತಿ ತಹಶೀಲ್ದಾರರು –ಪದನಿಮಿತ್ತ ಕಾರ್ಯದರ್ಶಿ

---

1. "ಹತ್ತು ಲಕ್ಷ ರೂಪಾಯಿಗಳು" ಎಂಬ ಪದಗಳ ಬದಲಾಗಿ 2012ರ ಅಧಿನಿಯಮ ಸಂಖ್ಯೆ 12ರ ಅನ್ವಯ ಪ್ರತಿಯೋಜಿಸಲಾಗಿದೆ ಮತ್ತು ಇದು ದಿನಾಂಕ: 5–3–2012 ರಿಂದ ಜಾರಿಗೆ ಬಂದಿದೆ.

2. 2012ರ ಅಧಿನಿಯಮ ಸಂಖ್ಯೆ 12ರ ಅನ್ವಯ (3)ನೇ ಉಪ–ಪ್ರಕರಣವನ್ನು ದಿನಾಂಕ 5–3–2012ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

3. 2011ರ ಅಧಿನಿಯಮ ಸಂಖ್ಯೆ 27ರ ಅನ್ವಯ ಪ್ರಕರಣ 21ರ ಬದಲಾಗಿ 21 ರಿಂದ 21–ಎಫ್ ಪ್ರಕರಣಗಳನ್ನು ಪ್ರತಿಯೋಜಿಸಲಾಗಿದೆ. ಮತ್ತು ಇದು ದಿನಾಂಕ: 4–5–2011 ರಿಂದ ಜಾರಿಗೆ ಬಂದಿದೆ.



(ಸಿ) [1][ನಾಲ್ಕು ವರ್ಷಗಳ] ಅವಧಿಗಾಗಿ ಸರ್ಕಾರದಿಂದ ನಾಮನಿರ್ದೇಶಿತರಾಗಬೇಕಾದ ಸದಸ್ಯರು

(i) ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಒಬ್ಬರು ನಿವೃತ್ತ ನ್ಯಾಯಾಂಗ ಅಧಿಕಾರಿ –ಸದಸ್ಯರು

(ii) ಒಬ್ಬರು ಆಗಮ ಪಂಡಿತರು –ಸದಸ್ಯರು

(iii) ಒಬ್ಬರು ವೇದ ವಿದ್ವಾಂಸರು –ಸದಸ್ಯರು

(iv) ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡದಿಂದ ಒಬ್ಬರು –ಸದಸ್ಯರು

(v) ಒಬ್ಬರು ಮಹಿಳೆ –ಸದಸ್ಯರು

(vi) ಹಿಂದುಳಿದ ವರ್ಗಗಳಿಂದ ಒಬ್ಬರು ವ್ಯಕ್ತಿ –ಸದಸ್ಯರು

(vii) [2][ಮೂವರು ಇತರರು] –ಸದಸ್ಯರು

(2) ನಿವೃತ್ತ ನ್ಯಾಯಾಂಗ ಅಧಿಕಾರಿಯನ್ನು ಹೊರತುಪಡಿಸಿ, (1)ನೇ ಉಪಪ್ರಕರಣದ ಅಡಿಯಲ್ಲಿ ಸರ್ಕಾರದಿಂದ ನಾಮನಿರ್ದೇಶಿತರಾದ ಸದಸ್ಯರು, ಸರ್ಕಾರದ ಇಚ್ಛೆಗೊಳಪಟ್ಟು ಪದದಲ್ಲಿರತಕ್ಕದ್ದು.

(3) ಸರ್ಕಾರದಿಂದ ನಾಮನಿರ್ದೇಶಿತನಾದ ಸದಸ್ಯನು, ಹಿಂದೂ ಧಾರ್ಮಿಕ ಕ್ಷೇತ್ರಕ್ಕೆ ಕೊಡುಗೆಯನ್ನು ನೀಡಿರುವ ವ್ಯಕ್ತಿಯಾಗಿರತಕ್ಕದ್ದು ಮತ್ತು ಯಾವುದೇ ಹಂತದಲ್ಲಿ ಯಾವುದೇ ರಾಜಕೀಯ ಪಕ್ಷದ ಪದಾಧಿಕಾರಿಯಾಗಿರತಕ್ಕದ್ದಲ್ಲ.

(4) ಮರಣ, ರಾಜೀನಾಮೆ ಅಥವಾ ಅನ್ಯಥಾ ಕಾರಣಕ್ಕಾಗಿ ಯಾವುದೇ ಖಾಲಿಸ್ಥಾನವು ಉಂಟಾದ ಸಂದರ್ಭದಲ್ಲಿ, ಸರ್ಕಾರವು ಅಂಥ ಸದಸ್ಯನ ಕಾಲಾವಧಿಯ ಉಳಿದ ಅವಧಿಗಾಗಿ ಒಬ್ಬ ಸದಸ್ಯನನ್ನು ನೇಮಿಸಬಹುದು.

(5) ಜಿಲ್ಲಾ ಧಾರ್ಮಿಕ ಪರಿಷತ್ತು, ಸಮಾಲೋಚನೆಯ ಉದ್ದೇಶಕ್ಕಾಗಿ, ಅದರ ಸಭೆಗೆ, ಪರಿಣತಿ ಮತ್ತು ವಿಶೇಷ ಜ್ಞಾನವುಳ್ಳ ಅಥವಾ ಯಾವುದೇ ವಿಷಯದಲ್ಲಿ ತಜ್ಞನಾಗಿರುವ ಯಾವೊಬ್ಬ ವ್ಯಕ್ತಿಯನ್ನು ಆಹ್ವಾನಿಸಬಹುದು ಮತ್ತು ಪ್ರತಿಯೊಬ್ಬ ಅಂಥ ವ್ಯಕ್ತಿಯು ನಿಯಮಿಸಬಹುದಾದ ಅಂಥ ಭತ್ಯೆ ಅರ್ಹನಾಗಿರತಕ್ಕದ್ದು.

(6) ಸರ್ಕಾರವು, ಅಧಿಸೂಚನೆಯ ಮೂಲಕ, ನಿಯಮಗಳನ್ನು ರೂಪಿಸುವ ಅಧಿಕಾರವನ್ನು ಹೊರತುಪಡಿಸಿ, ಈ ಅಧಿನಿಯಮದ ಉಪಬಂಧಗಳಡಿಯಲ್ಲಿ ತನ್ನ ಯಾವುದೇ ಅಧಿಕಾರಗಳು ಹಾಗೂ ಪ್ರಕಾರ್ಯಗಳನ್ನು ಜಿಲ್ಲಾ ಧಾರ್ಮಿಕ ಪರಿಷತ್ತಿಗೆ ಪ್ರತಿಯೋಜಿಸಬಹುದು.

---

1. "ಮೂರು ವರ್ಷಗಳ" ಎಂಬ ಪದಗಳ ಬದಲಾಗಿ 2012ರ ಅಧಿನಿಯಮ ಸಂಖ್ಯೆ 12ರ ಅನ್ವಯ ಪ್ರತಿಯೋಜಿಸಲಾಗಿದೆ. ಮತ್ತು ಇದು ದಿನಾಂಕ: 5–3–2012 ರಿಂದ ಜಾರಿಗೆ ಬಂದಿದೆ.

2. 2012ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ: 5–3–2012 ರಿಂದ ಪ್ರತ್ಯಾಯೋಜಿಸಲಾಗಿದೆ.

[1][(7) ಅಧ್ಯಕ್ಷನ ಗೈರು ಹಾಜರಿಯಲ್ಲಿ, ನ್ಯಾಯಿಕ ಸದಸ್ಯನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.]

(8) ಜಿಲ್ಲಾ ಧಾರ್ಮಿಕ ಪರಿಷತ್ತಿನ ನಾಮನಿರ್ದೇಶಿತ ಸದಸ್ಯರ ಗೈರುಹಾಜರಿಯಲ್ಲಿ ಉಳಿದ ಸದಸ್ಯರು ಜಿಲ್ಲಾ ಧಾರ್ಮಿಕ ಪರಿಷತ್ತನ್ನು ರಚಿಸತಕ್ಕದ್ದು.

(9) ಜಿಲ್ಲಾ ಧಾರ್ಮಿಕ ಪರಿಷತ್ತಿನ ಸಂಬಂಧದಲ್ಲಿನ ಅಥವಾ ಅದಕ್ಕೆ ಮಾಡುವ ಎಲ್ಲಾ ಪತ್ರವ್ಯವಹಾರಗಳು, ಜಿಲ್ಲಾ ಧಾರ್ಮಿಕ ಪರಿಷತ್ತಿನ ಕಾರ್ಯದರ್ಶಿಯಿಂದ ಅಥವಾ ಅವರಿಗೆ ಮಾಡತಕ್ಕದ್ದು ಮತ್ತು ಇದು ದಾವೆ ಹೂಡುವ ಅಥವಾ ದಾವೆಗೆ ಒಳಗಾಗುವ ಅಧಿಕಾರವನ್ನೂ ಒಳಗೊಳ್ಳುತ್ತದೆ.

**21–ಎ. ಜಿಲ್ಲಾ ಧಾರ್ಮಿಕ ಪರಿಷತ್ತಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು / Powers and Functions of the Zilla Dharmika Parishat.–** [2][(1) ರಾಜ್ಯ ಧಾರ್ಮಿಕ ಪರಿಷತ್ತಿನ ಅಧಿಕಾರಗಳಿಗೆ ಒಳಪಟ್ಟು, ಜಿಲ್ಲಾ ಧಾರ್ಮಿಕ ಪರಿಷತ್ತು, ಜಿಲ್ಲೆಯೊಳಗಿನ ಯಾವ ಧಾರ್ಮಿಕ ಸಂಸ್ಥೆಗಳ ವಾರ್ಷಿಕ ಆದಾಯವು ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಮೀರಿಲ್ಲವೋ ಆ ಧಾರ್ಮಿಕ ಸಂಸ್ಥೆಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣದ ಸಾಮಾನ್ಯ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅಂಥ ಮೇಲ್ವಿಚಾರಣೆ ಹಾಗೂ ನಿಯಂತ್ರಣವು ಅಂಥ ಸಂಸ್ಥೆಗಳು ಮತ್ತು ದತ್ತಿಗಳು ಉಚಿತ ರೀತಿಯಲ್ಲಿ ಆಡಳಿತ ನಡೆಸಲ್ಪಡುತ್ತಿವೆ ಹಾಗೂ ಅವುಗಳ ಆದಾಯವು, ಅವುಗಳು ಸ್ಥಾಪನೆಯಾಗಿರುವ ಅಥವಾ ಅಸ್ತಿತ್ವದಲ್ಲಿರುವ ಉದ್ದೇಶಕ್ಕಾಗಿ ಸೂಕ್ತವಾಗಿ ವಿನಿಯೋಗಿಸಲ್ಪಡುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಅವಶ್ಯವಾಗಬಹುದಾದ ಯಾವುದೇ ಆದೇಶವನ್ನು ಹೊರಡಿಸುವುದಕ್ಕೆ ಅಥವಾ ನಿರ್ದೇಶನಗಳನ್ನು ನೀಡುವುದಕ್ಕೆ ಅಧಿಕಾರವನ್ನು ಒಳಗೊಂಡಿರತಕ್ಕದ್ದು.]

(2) ಜಿಲ್ಲಾ ಧಾರ್ಮಿಕ ಪರಿಷತ್ತು, (1)ನೇ ಉಪ ಪ್ರಕರಣದಡಿಯಲ್ಲಿನ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳಿಗೆ ಹೆಚ್ಚುವರಿಯಾಗಿ,–

(ಎ) ಒಂದು ಲಕ್ಷ ರೂಪಾಯಿಗಳು ಮತ್ತು ಅದಕ್ಕಿಂತ ಮೇಲ್ಪಟ್ಟು ಆದರೆ [2][ಇಪ್ಪತ್ತೈದು ಲಕ್ಷ ರೂಪಾಯಿಗಳಿಗಿಂತ] ಕಡಿಮೆ ಒಟ್ಟು ವಾರ್ಷಿಕ ಆದಾಯವನ್ನು ಹೊಂದಿರುವ ಅಧಿಸೂಚಿತ ಸಂಸ್ಥೆಗಳಿಗೆ ವ್ಯವಸ್ಥಾಪನಾ ಸಮಿತಿಯನ್ನು ರಚಿಸುವ,

(ಬಿ) 28ನೇ ಪ್ರಕರಣದಡಿಯಲ್ಲಿ ಉಪಬಂಧಿಸಲಾದಂತೆ ಒಂದು ಲಕ್ಷ ರೂಪಾಯಿಗಳು ಮತ್ತು ಅದಕ್ಕಿಂತ ಮೇಲ್ಪಟ್ಟು ಆದರೆ [2][ಇಪ್ಪತ್ತೈದು ಲಕ್ಷ ರೂಪಾಯಿಗಳಿಗಿಂತ] ಕಡಿಮೆ ಆದಾಯವನ್ನು ಹೊಂದಿರುವ ಅಧಿಸೂಚಿತ ಸಂಸ್ಥೆಗಳ ವ್ಯವಸ್ಥಾಪನಾ ಸಮಿತಿಯನ್ನು ವಿಸರ್ಜಿಸುವ, –ಅಧಿಕಾರವನ್ನು ಹೊಂದಿರತಕ್ಕದ್ದು.

(3) ಜಿಲ್ಲಾ ಧಾರ್ಮಿಕ ಪರಿಷತ್ತಿನ ಅಧಿಕಾರ ವ್ಯಾಪ್ತಿಯೊಳಗೆ ಬರುವ ವಿವಾದಗಳನ್ನು, ಪರಿಷತ್ತಿನ ನ್ಯಾಯಿಕ ಸದಸ್ಯ ಹಾಗೂ ಕಾರ್ಯದರ್ಶಿಯನ್ನು ಒಳಗೊಂಡಂಥ ನ್ಯಾಯಾಧಿಕರಣವು ನಿರ್ಣಯಿಸತಕ್ಕದ್ದು. ಅವರಲ್ಲಿ ಯಾವುದೇ ಭಿನ್ನಾಭಿಪ್ರಾಯವಿದ್ದಲ್ಲಿ, ವಿವಾದವನ್ನು ಜಿಲ್ಲಾ ಧಾರ್ಮಿಕ ಪರಿಷತ್ತು ನಿರ್ಧರಿಸತಕ್ಕದ್ದು.

1. 2012ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ: 5–3–2012 ರಿಂದ ಪ್ರತ್ಯಾಯೋಜಿಸಲಾಗಿದೆ.
2. 2012ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ: 5–3–2012 ರಿಂದ ಪ್ರತ್ಯಾಯೋಜಿಸಲಾಗಿದೆ.



**21–ಬಿ. ಧಾರ್ಮಿಕ ಪರಿಷತ್ತಿನ ಸದಸ್ಯರ ಅರ್ಹತೆಗಳು ಮತ್ತು ಅನರ್ಹತೆಗಳು / Qualification and Disqualification of the Members of the Dharmika Parishats.–** (1) ರಾಜ್ಯ ಧಾರ್ಮಿಕ ಪರಿಷತ್ತು ಮತ್ತು ಜಿಲ್ಲಾ ಧಾರ್ಮಿಕ ಪರಿಷತ್ತಿನ ಸದಸ್ಯನು ಹಿಂದೂ ಆಗಿರತಕ್ಕದ್ದು ಹಾಗೂ ಆತನು, ಅಂಥ ಧರ್ಮವನ್ನು ಅನುಸರಿಸುತ್ತಿರುವುದು ನಿಂತುಹೋದಾಗ ಪದದಲ್ಲಿರುವುದೂ ನಿಂತುಹೋಗತಕ್ಕದ್ದು.

(2) ಒಬ್ಬ ವ್ಯಕ್ತಿಯು,–

(ಎ) ಅವನು ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಬಿ) ಅವನು ಅಸ್ವಸ್ಥಚಿತ್ತನಾಗಿದ್ದು ಮತ್ತು ಸಕ್ಷಮ ನ್ಯಾಯಾಲಯದಿಂದ ಹಾಗೆಂದು ಘೋಷಿಸಲಾಗಿದ್ದರೆ: ಅಥವಾ

(ಸಿ) ನೈತಿಕ ಅಧಃಪತನವನ್ನು ಒಳಗೊಳ್ಳುವ ಒಂದು ಅಪರಾಧಕ್ಕಾಗಿ ಕ್ರಿಮಿನಲ್ ನ್ಯಾಯಾಲಯದಿಂದ- ಶಿಕ್ಷಿತನಾಗಿದ್ದರೆ; ಅಥವಾ

(ಡಿ) ಯಾವುದೇ ಸಮಯದಲ್ಲಿ ಹಿಂದೂ ಧಾರ್ಮಿಕ ಸಂಸ್ಥೆಗಳ ಹಿತಾಸಕ್ತಿಗೆ ವಿರುದ್ಧವಾಗಿ ವರ್ತಿಸಿದ್ದರೆ; ಅಥವಾ

(ಇ) ಅವನು ಮದ್ಯಪಾನ ಅಥವಾ ಮಾದಕ ದ್ರವ್ಯ ಸೇವನೆಯ ದುರ್ವ್ಯಸನಿಯಾಗಿದ್ದರೆ ಅಥವಾ ಜೂಜಾಡುವವನಾಗಿದ್ದರೆ,–ಪರಿಷತ್ತಿನ ಸದಸ್ಯನಾಗಿ ನೇಮಕಗೊಳ್ಳಲು ಅಥವಾ ಸದಸ್ಯನಾಗಿ ಮುಂದುವರೆಯಲು ಅನರ್ಹನಾಗಿರತಕ್ಕದ್ದು.

**21–ಸಿ. ರಾಜ್ಯ ಧಾರ್ಮಿಕ ಪರಿಷತ್ತಿನ ಮತ್ತು ಜಿಲ್ಲಾ ಧಾರ್ಮಿಕ ಪರಿಷತ್ತಿನ ಸದಸ್ಯರನ್ನು ತೆಗೆದುಹಾಕುವುದು ಮತ್ತು ಅನರ್ಹಗೊಳಿಸುವುದು / Removal and Disqualification of the Members of the Rajya Dharmika Parishat and Zilla Dharmika Parishat.–** ರಾಜ್ಯ ಸರ್ಕಾರವು, ರಾಜ್ಯ ಧಾರ್ಮಿಕ ಪರಿಷತ್ತು ಅಥವಾ ಜಿಲ್ಲಾ ಧಾರ್ಮಿಕ ಪರಿಷತ್ತಿನ ಅಧಿಕಾರೇತರ ಸದಸ್ಯನನ್ನು, ಅಂಥ ಆರೋಪಗಳ ಮೇಲೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ನಂತರ ರುಜುವಾತಾದ ದುರ್ನಡತೆ ಮತ್ತು ದುರ್ವರ್ತನೆಗಾಗಿ ತೆಗೆದುಹಾಕಬಹುದು ಅಥವಾ ಅನರ್ಹಗೊಳಿಸಬಹುದು.

**21–ಡಿ. ರಾಜ್ಯ ಧಾರ್ಮಿಕ ಪರಿಷತ್ತು ಮತ್ತು ಜಿಲ್ಲಾ ಧಾರ್ಮಿಕ ಪರಿಷತ್ತಿನ ಸಭೆ / Meeting of the Rajya Dharmika Parishad and Zilla Dharmika Parishat.–** (1) ರಾಜ್ಯ ಧಾರ್ಮಿಕ ಪರಿಷತ್ತು ಮತ್ತು ಜಿಲ್ಲಾ ಧಾರ್ಮಿಕ ಪರಿಷತ್ತಿನ ನಿಯತಕಾಲಿಕ ಸಭೆಗಳನ್ನು ನಿಯಮಿಸಬಹುದಾದಂಥ ಮಧ್ಯಂತರ ಅವಧಿಗಳಲ್ಲಿ ನಡೆಸತಕ್ಕದ್ದು.

(2) ರಾಜ್ಯ ಧಾರ್ಮಿಕ ಪರಿಷತ್ತು ಮತ್ತು ಜಿಲ್ಲಾ ಧಾರ್ಮಿಕ ಪರಿಷತ್ತಿನ ಸದಸ್ಯರಿಗೆ ಸಂದಾಯ ಮಾಡಬೇಕಾದ ಉಪವೇಶನ ಶುಲ್ಕ ಮತ್ತು ಭತ್ಯೆಗಳು ನಿಯಮಿಸ ಬಹುದಾದಂತೆ ಇರತಕ್ಕದ್ದು.

**21–ಇ. ರಾಜ್ಯ ಸರ್ಕಾರದಿಂದ ನಿಯಂತ್ರಣ / Control by the State Governments.–** ರಾಜ್ಯ ಸರ್ಕಾರವು, ರಾಜ್ಯ ಧಾರ್ಮಿಕ ಪರಿಷತ್ತಿನ ಮತ್ತು ಜಿಲ್ಲಾ ಧಾರ್ಮಿಕ ಪರಿಷತ್ತಿನ ಚಟುವಟಿಕೆಗಳು ಹಾಗೂ ವ್ಯವಹಾರಗಳ ಮೇಲೆ ಸಾಮಾನ್ಯ ಆಡಳಿತಾತ್ಮಕ ಹಾಗೂ ಮೇಲ್ವಿಚಾರಣೆಯ ನಿಯಂತ್ರಣವನ್ನು ಹೊಂದಿರತಕ್ಕದ್ದು.